# ಪತ್ರಿಕಾ ಪ್ರಕಟಣೆ

ಬಳ್ಳಾರಿ ಜಿಲ್ಲೆಯ ರೈತರ ಜಾನುವಾರುಗಳಿಗೆ ಗುಣಮಟ್ಟದ ತ್ವರಿತ ಸೇವೆ ನೀಡಲು ಜಿಲ್ಲೆಯ ಗ್ರಾಮೀಣ ಭಾಗದ ಪಶು ವೈದ್ಯಕೀಯ ಸಂಸ್ಥೆಗಳಿಗೆ ಪಶು ವೈದ್ಯರ ಸೇವೆ ಅವಶ್ಯಕತೆ ಇರುವುದರಿಂದ ಸ್ವಯಂ ಪ್ರೇರಿತರಾಗಿ ಸೇವೆ ಸಲ್ಲಿಸಲು ಇಚ್ಚಿಸುವ ಪಶುವೈದ್ಯ ಪದವೀಧರರನ್ನು ಮಾಸಿಕ ರೂ 28000/- ಗೌರವಧನದೊಂದಿಗೆ ಸ್ವಯಂ ಪ್ರೇರಿತರಾಗಿ ತಾತ್ಕಾಲಿಕ ಸೇವೆ ಸಲ್ಲಿಸಲು ಆಸಕ್ತಿ ಇರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

**ಅರ್ಹತೆ:** ಪಶುವೈದ್ಯ ಪದವಿ (B.V.Sc. & A.H) ಪಡೆದಿರಬೇಕು ಮತ್ತು ಕಡ್ಡಾಯವಾಗಿ ಕೆ.ವಿ.ಸಿ. ನೋಂದಣಿ ಹೊಂದಿರಬೇಕು.

**ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ವಿಧಾನ:** ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಬಳ್ಳಾರಿ ಜಿಲ್ಲಾ ವೆಬ್ ಸೈಟ್ : www.bellary.nic.in ರ ಮುಖಾಂತರ ದಿನಾಂಕ: 10/07/2017 ರಿಂದ 22/07/2017 ರ ಸಂಜೆ 5.30 ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

**ಅಭ್ಯರ್ಥಿಗಳ ಆಯ್ಕೆ ವಿಧಾನ:** ದಿನಾಂಕ: 26/07/2017 ರಂದು ಸಮಯ ಬೆಳಿಗ್ಗೆ 10.00 ಗಂಟೆಯಿಂದ ಉಪನಿರ್ದೇಶಕರು ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಬಳ್ಳಾರಿ ರವರ ಕಾರ್ಯಾಲಯದ ಸಭಾಂಗಣದಲ್ಲಿ ನೇರ ಸಂದರ್ಶನದ ಮೂಲಕ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಅಂದು ತಪ್ಪದೇ ಮೂಲ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗತಕ್ಕದ್ದು.

**ಸಂಪರ್ಕಿಸಬೇಕಾದ ದೂರವಾಣಿಯ ವಿವರ:** ಉಪ ನಿರ್ದೇಶಕರ ಕಛೇರಿ, ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬಳ್ಳಾರಿಯ ದೂರವಾಣಿ ಸಂಖ್ಯೆ: 08392-275146.
ಫ್ಯಾಕ್ಸ ಸಂಖ್ಯೆ: 08392- 270948.

DEPUTY COMMISSIONER
BALLARI.